# ಮಡಿ ಸುಳಾದಿ

–ಧ್ರುವತಾಳ–

ಮಡಿ ಮಾಡುವದೊ ಮಾನವ ನಡತಿ ನುಡತಿ ತಿಳಿದೂ
ಬಿಡದೆ ಪ್ರತಿದಿನ ಮಿರ್ಮಲದಿ ಮಡಿ, ನೀರೊಳಗೆ ಒಗೆದು
ಮಡಿಸಿ ಬಗೆಬಗೆಯಿಂದ ಮಡಕಿ ಹಾಕಿಟ್ಟರೆ ಮಡಿಯಲ್ಲ ।
ಧೃಢದಲಿ ತಿಳಿದುನೋಡಿ ಮಡಿ ನೀರೊಳಗೆ ಇಲ್ಲ ।
ಮಡಿ ದೇಶದೊಳಗಿಲ್ಲ ಮಡಿ ವಸನದೊಳಗಿಲ್ಲ ।
ಮಡಿ ನಭದಲ್ಲಿ ಇಲ್ಲ ಮಡಿ ಮಾಡೊ ಉಪಾಯವ ।
ವೊಡನೆ ತನ್ನಲಿ ಉಂಟು ಪೊಡವಿ ತಿರುಗಲು ಸಲ್ಲ ।
ಅಡಿಗಡಿಗೆ ದಣಿವುದಲ್ಲ ಅಡಿಗಳಿಟ್ಟು ನೋಡಿ ।
ನಡೆದರೆ ಮಡಿಯಲ್ಲ ಮಡಿಯಾಪ್ಪನೆಂದು ಉಡಿಗೆ ಮುದುರಿಕೊಂಡು
ಅಡಿಅಡಿಗ್ಹಾರಿದರೆ ಮಡಿಯಾಗುವುದೇನೋ ।
ಕಡು ಮುದ್ದು ಮೋಹನ ವಿಜಯ ವಿಟ್ಠಲನ್ನ ।
ಅಡಿಗೆರಗದವನ ಮಡಿಯಾತಕ್ಕೆ ಒಪ್ಪದೊ ॥ ೧ ॥

–ಮಟ್ಟತಾಳ–

ಕಾಮಕ್ರೋಧದಲಿ ತಿರುಗಲು ಮಡಿ ಅಲ್ಲ ।
ಕಾಮನ ಬಳಗಕ್ಕೆ ಸೋಲಲು ಮಡಿಯಲ್ಲ ।
ತಾಮಸ ವೃತ್ತಿಯಲಿ ಇದ್ದರೆ ಮಡಿಯಲ್ಲ ।
ಹೇಮದ ಬಯಕೆಯಲಿ ಚರಿಸಲು ಮಡಿಯಲ್ಲ ।
ಯಾಮ ಯಾಮಕ್ಕೆ ಹರಿಯ ಮರೆತರೆ ಮಡಿಯಲ್ಲ ।
ನಾಮವ ಧರಿಸಿದ್ದರೆ ಅದು ಮಡಿ ಅಲ್ಲ ।
ನೇಮ ನಿತ್ಯಗಳ ತೊರೆತರೆ ಅದು ಮಡಿ ಅಲ್ಲ ।
ಭೂಮಿ ಪಾಲಕ ನಮ್ಮ ವಿಜಯವಿಟ್ಠಲರೇಯನ ।
ನಾಮವನು ಮರೆದವನು ಎಂದಿಗೂ ಮಡಿಯಲ್ಲ ॥ ೨ ॥

–ತ್ರಿವಿಡಿತಾಳ–

ಹಸುವ ಕಾಲಲಿ ಒದೆದರೆ ಮಡಿಯಲ್ಲ ।
ಹಸು ಮಕ್ಕಳ ನೂಕಿ ಬಿಟ್ಟರೆ ಮಡಿಯಲ್ಲ ।
ವಶಳಾದ ನಾರಿಯ ತೊರೆದರೆ ಮಡಿಯಲ್ಲ ।
ವಸುಧಿ ಸುರರ ಕಂಡು ಬೈದರೆ ಮಡಿಯಲ್ಲ ।
ವಿಷವಿಕ್ಕಿ ಜನರ ಕೊಂದರೆ ಮಡಿಯಲ್ಲ ।
ನಿಶೆಯಲಿ ಉಂಡವನು ಎಂದಿಗೂ ಮಡಿಯಲ್ಲ ।
ಅಸೂಯೆ ಬಟ್ಟುಕೊಂಡರೆ ಅದು ಮಡಿಯಲ್ಲ ।
ಅಶನಘಾತಕವಾಗಿ ಇದ್ದವನು ಮಡಿಯಲ್ಲ ।
ದಶಮಿ ದ್ವಾದಶಿ ಕನ್ಯಾದಾನವು ಮಡಿಯಲ್ಲ ।
ಕುಶಲ ಮೂರುತಿ ನಮ್ಮ ವಿಜಯವಿಟ್ಠಲರೇಯನ ।
ಬೆಸನ ಭಕುತಿಯ ಬೇಡದಿದ್ದರೆ ಮಡಿಯಲ್ಲ ॥ ೩ ॥

–ಅಟ್ಟತಾಳ–

ಸಕೇಶಿ ಕೈಯಿಂದ ಉಂಡರೆ ಮಡಿಯಲ್ಲ ।
ಸಿಕ್ಕಿದವರ ಬಳಲಿಸಿದರೆ ಮಡಿಯಲ್ಲ ।
ವಾಕುಬದ್ಧವಿಲ್ಲದವನಿಗೆ ಮಡಿಯಲ್ಲ ।
ಶ್ರೀಕಾಂತನ ಸ್ಮರಣೆ ಮರೆತರೆ ಮಡಿಯಲ್ಲ ।
ಏಕಾಂತ ಧ್ಯಾನವು ಇಲ್ಲದೆ ಮಡಿಯಲ್ಲ ।
ಪಾಕಶಾಸನ ವಂದ್ಯ ವಿಜಯವಿಟ್ಠಲರೇಯನು ।
ಸಾಕುವನೆನ್ನದಿದ್ದರೆ ಅದು ಮಡಿಯಲ್ಲ ॥ ೪ ॥

–ಆದಿತಾಳ–

ಗುರುಗಳಿಗೆ ನಮಿಸದಿದ್ದರೆ ಅದು ಮಡಿಯಲ್ಲ ।
ದುರುಳ ಜನರ ಸಂಗವಿದ್ದರೆ ಮಡಿಯಲ್ಲ ।
ಕರೆಕರೆ ಸತಿಯಿಂದ ದಾನಾದಿಗೆ ಮಡಿಯಲ್ಲ ।
ತರಣಿಯ ದೃಷ್ಟಿಸೇ ಕೇವಲ ಮಡಿಯಲ್ಲ ।
ಪರಮಶುದ್ಧ ನಮ್ಮ ವಿಜಯವಿಟ್ಠಲನ ।
ಚರಣದಲಿ ರತಿ ಇಲ್ಲದಲೆ ಮಡಿ ಅಲ್ಲ ॥ ೫ ॥

–ಜತೆ–

ಕೋಪದವನ ಸಂಗಡದಲಿರೆ ಮಡಿಯಲ್ಲ ।
ಶ್ರೀಪತಿ ವಿಜಯವಿಟ್ಠಲನೊಲಿಯದಿರೆ ಮಡಿಯಲ್ಲ ॥ ೬ ॥